# 43. ಸ.ಕಿ.ಪ್ರಾ. ಶಾಲೆ ದುಬಾರತಟ್ಟಿ.

## ಶಾಲೆಯ ಹಿನ್ನೆಲೆ :-

ಸರಕಾರಿ ಕಿರಿಯ ಪ್ರಾಥಮಿಕ ಶಾಲೆ ದುಬಾರತಟ್ಟಿ, ನಗರ, ಹೊಸನಗರ ತಾಲ್ಲೂಕಿನ ಹಿಂದುಳಿದ ಹಾಗು ಹಿನ್ನಿರಿನಿಂದ ಆವೃತವಾದ ಒಂದು ಕುಗ್ರಾಮ, ಈ ಗ್ರಾಮದಲ್ಲಿ ಸುಮಾರು 90 ಕುಟುಂಬಗಳು ವಾಸವಾಗಿದ್ದು ಸುಮಾರು 380 ಜನ ಸಂಖ್ಯೆ ಹೊಂದಿದೆ ಹಾಗು ಶೇ.65 ರಷ್ಟು ಸಾಕ್ಷರತೆ ಹೊಂದಿದೆ. ಅಲ್ಪಸಂಖ್ಯಾತರು ಹೆಚ್ಚಾಗಿರುವ ಈ ಗ್ರಾಮದಲ್ಲಿ 1998 ರಲ್ಲಿ ಕಿರಿಯ ಪ್ರಾಥಮಿಕ ಶಾಲೆ ಪ್ರಾರಂಭವಾಯಿತು. ಸದರಿ 23 ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದು ಶಾಲೆಯಲ್ಲಿ ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯು ಉತ್ತಮ ಬೌತಿಕ ಹಾಗು ಬೌದ್ದಿಕ ಸೌಲಭ್ಯ ಹೊಂದಿದೆ.

ಪೋಷಕರು ಹಾಗು ಗ್ರಾಮಸ್ಥರು ಶಾಲೆಯ ಬಗ್ಗೆ ಕಾಳಜಿ ಹೊಂದಿದ್ದು ಗ್ರಾಮ ಪಂಚಾಯತಿ ಸಹಯೋಗದಿಂದ ಶಾಲೆಯಲ್ಲಿ ಅನೇಕ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬಂದಿದ್ದಾರೆ. ಶಾಲೆಯಲ್ಲಿ ವಿದ್ಯುತ್ ವ್ಯವಸ್ಥೆ, ಗಣಕ ಯಂತ್ರ, ಸುಸಜ್ಜಿತ ಬೋಧನಾ **ಕೊಠಡಿ**, ಗಂಡು ಮತ್ತು ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆ, ಕಲಿಕೋಪಕರಣ, ಆಟದ ಮೈದಾನ, ಶುದ್ದ ಕುಡಿಯುವ ನೀರಿನ ವ್ಯವಸ್ಥೆ, ಶಾಲಾ ಕೈ ತೋಟವು ಅಪರೂಪದ ಔಷದಿ ಸಸ್ಯಗಳನ್ನು ಹೊಂದಿದ್ದು ಹಸಿರಿನಿಂದ ಕೂಡಿದೆ.

## ಶಾಲೆಯಲ್ಲಿ ಕೈಗೊಂಡ ನಾವಿನ್ಯಯುತ ಚಟುವಟಿಕೆಗಳು:-

1. **ಅತ್ಯುತ್ತಮ ನಲಿ ಕಲಿ ವ್ಯವಸ್ಥೆ:-**
ಮಕ್ಕಳ ಕಲಿಕಾ ಗುಣಮಟ್ಟವನ್ನು ಉತ್ತಮ ಪಡಿಸುವಲ್ಲಿ ನಲಿ ಕಲಿ ಪದ್ದತಿಯು ಒಂದು ವಿನೂತನ ಉತ್ತಮ ಯೋಜನೆಯಾಗಿದ್ದು, ನಮ್ಮ ಶಾಲೆಯಲ್ಲಿ ನಲಿ ಕಲಿಗೆ ಹೆಚ್ಚು ಒತ್ತು ಕೊಟ್ಟು ಅನುಷ್ಠಾನಗೊಳಿಸಲಾಗಿದೆ. ಮಕ್ಕಳ ಕಲಿಕಾ ಅನುಕೂಲತೆಗೆ ತಕ್ಕಂತೆ ಕಲಿಕಾ ಸಾಮಾಗ್ರಿಗಳನ್ನು ಸುವ್ಯವಸ್ಥಿತವಾಗಿ ಜೋಡಿಸಿ ಕಲಿಕಾ ಪೂರಕ ವಾತಾವರಣವನ್ನು ನಿರ್ಮಿಸಲಾಗಿದೆ.
2. ಸುಂದರ ಶಾಲಾ ವನ ನಿರ್ಮಾಣ:-
" ಮಗುವಿಗೊಂದು ಗಿಡ ಶಾಲೆಗೊಂದು ವನ" ಕಾರ್ಯಕ್ರಮ ಜಾರಿಗೆ ತಂದಿದ್ದು ಪ್ರತಿ ಮಗುವು ದಾಖಲಾಗುವಾಗ ಒಂದು ಗಿಡ ತಂದು ನೆಟ್ಟು ಪೋಷಿಸುವ ಕಾರ್ಯದೊಂದಿಗೆ ಸುಂದರ ಶಾಲಾ ವನ ನಿರ್ಮಾಣಗೊಂಡಿದ್ದು, ಮಕ್ಕಳ ಪರಿಸರ ಅದ್ಯಯನ, ನಿಸರ್ಗದಲ್ಲಿ ಕಲಿಕೆ, ಸ್ವ ಕಲಿಕೆಗೆ ಅನುವು ಮಾಡಲಾಗಿದೆ. ಶಾಲಾ ಕೈ ತೋಟದಲ್ಲಿ ಸೊಪ್ಪು, ತರಕಾರಿ ಬೆಳೆಸಿ. ಬಿಸಿ ಊಟಕ್ಕೆ ಬಳಸಲಾಗುತ್ತಿದೆ. ಬಳಸಿ ಹೆಚ್ಚಾದ ತರಕಾರಿಗಳನ್ನು ಮಕ್ಕಳ ಮನೆಗೆ ಸರದಿ ಪ್ರಕಾರ ಕಳಿಸಲಾಗುತ್ತಿದೆ.
3. ಔಷಧಿ ವನ ನಿರ್ಮಾಣ:-
ಬಜೆ, ಲಾವಂಚ, ಹಿಪ್ಪಲಿ ಮುಂತಾದ ಸುಮಾರು ನೂರಕ್ಕೂ ಹೆಚ್ಚು ಔಷದಿ ಸಸ್ಯಗಳನ್ನು ಬೆಳೆಸಿದ್ದು ಮಕ್ಕಳು ಹಾಗು ಊರಿನವರು ಇದರ ಸದುಪಯೋಗ ಪಡೆಯುತ್ತಿದ್ದಾರೆ.
4. ಜೀವನ ಶಿಕ್ಷಣ ಕಾರ್ಯಗಾರ:-
ಮಕ್ಕಳಿಗೆ ಸ್ಥಳೀಯ ಪ್ರಗತಿಪರ ರೈತರು, ಗುಡಿ ಕೈಗಾರಿಕೆ ಮತ್ತು ಹೈನುಗಾರಿಕೆ ನಡೆಸುವವರು ಬೆಟಿಮಾಡಿ ಹೆಚ್ಚಿನಜ್ಞಾನಾರ್ಜನೆಗೆ ಒತ್ತು ನೀಡಲಾಗಿದೆ. ಮಳೆಗಾಲದಲ್ಲಿ ಮಳೆನೀರಿನ ಸದ್ಬಳಕೆ, ಇಂಗು ಗುಂಡಿ ನಿರ್ಮಾಣ, ಬದು ನಿರ್ಮಾಣ ಮಾಡುವುದರೊಂದಿಗೆ ಅನುಭವ ಜನ್ಯ ಕಲಿಕೆಗೆ ಒತ್ತು ನೀಡಲಾಗಿದೆ.
5. ಆಕರ್ಷಕ ಕಲಿಕೋಪರಣಗಳು:-
ಸ್ಥಳಿಯ ವಸ್ತುಗಳಿಂದ ಸರಳ ಮಾದರಿಗಳನ್ನು ತಯಾರಿಸಲಾಗುತ್ತಿದೆ. **ಪಠ್ಯ**ವಿಷಯಕ್ಕೆ ಸಂಬಂಧಿಸಿದ ಕಲಿಕೋಪಕರಣತಯಾರಿಸಿ ಪ್ರತಿ ವರ್ಷ ಪ್ರದರ್ಶನ ನಡೆಸಿ ಕಲಿಕೆಯಕಡೆಗೆ ಆಸಕ್ತಿಯನ್ನು ಮೂಡಿಸಲಾಗುತ್ತಿದೆ.

### ಆರಂಭದ ಸವಾಲುಗಳು:-

1. ಗ್ರಾಮೀಣ ಪ್ರದೇಶದಲ್ಲಿ ಕೂಲಿ ಕಾರ್ಮಿಕರೆ ಹೆಚ್ಚಿರುವುದರಿಂದ ಸಮುದಾಯದವರನ್ನು ಶಾಲಾ ಕೆಲಸಗಳಿಗೆ ತೊಡಗಿಸಿಕೊಳ್ಳುವುದು ಕಷ್ಟ.
2. ಮೂಲ ಸೌಲಭ್ಯಗಳಾದ ನೀರು, ವಿದ್ಯುತ್ತು,ಶೌಚಾಲಯ, ತಡೆಗೋಡೆಯ ಕೊರತೆ.
3. ಭಾಗೀದಾರರಲ್ಲಿ ಶಾಲೆಯ ಬಗ್ಗೆ ನಿರಾಸಕ್ತಿ.
4. ರಜಾ ಕಾಲದಲ್ಲಿ ಶಾಲೆಯ ರಕ್ಷಣಾ ಸಮಸ್ಯೆ. ಶಾಲಾ ಆಸ್ತಿ ನಮ್ಮ ಆಸ್ತಿ ಎಂಬ ಕಲ್ಪನೆ ಇಲ್ಲದಿರುವುದು.
5. ಸಂಪನ್ಮೂಲಗಳ ಕ್ರೂಡಿಕರಣದಲ್ಲಿ ಸಮಸ್ಯೆ.

## ಪರಿಹಾರಕ್ಕೆ ಕೈಗೊಂಡ ಕ್ರಮ:-

ಶಾಲಾ ಅಭಿವೃದ್ಧಿಯ ಬಗ್ಗೆ ಚರ್ಚಿಸಲು ಸಭೆ ನಡೆಸಿ, ಭಾಗೀದಾರರನ್ನು ಸೇರಿಸಿ ಸಭೆ ನಡೆಸಲಾಯಿತು. ಶಾಲಾ ಅಭಿವೃದ್ಧಿ ಸಮಿತಿಯವರು, ಗ್ರಾ. ಪಂ ಸದಸ್ಯರು, ಪೋಷಕರು, ಹಾಗು ಗ್ರಾಮಸ್ಥರಿಂದ ಸಂಪನ್ಮೂಲ ಕ್ರೂಡಿಕರಿಸಲಾಯಿತು. ಶಾಲಾ ಕೈ ತೋಟದ ರಕ್ಷಣೆಯನ್ನು ಶಾಲಾಭಿವೃದ್ಧಿ ಸಮಿತಿಯ ಸದಸ್ಯರಿಗೆ ವಹಿಸಲಾಯಿತು. ದಾನಿಗಳ ಸಹಾಯದಿಂದ ಹನಿ ನೀರಾವರಿ ಮತ್ತು ಸುಂದರ ಕುಟೀರವನ್ನು ನಿರ್ಮಾಣ ಮಾಡಲಾಯಿತು. ಭಾಗೀದಾರರನ್ನು ಶಾಲೆಗೆ ಆಹ್ವಾನಿಸಿ ಶಾಲಾಭಿವೃದ್ಧಿಯ ಅವಲೋಕನ ಮಾಡುವಂತೆ ತಿಳಿಸಲಾಯಿತು.

## ದಾನಿಗಳು:-

ಪೋಷಕರು, ಗ್ರಾಮಸ್ಥರು, ಶಾಲೆಗೆ ಬೇಕಾದ ವಸ್ತುಗಳನ್ನು ದಾನದ ರೂಪದಲ್ಲಿ ನೀಡಿರುತ್ತಾರೆ. ಜನ ಸೇವಕ ಟ್ರಸ್ಟ್ ರವರು ಗಣಕಯಂತ್ರ ನೀಡಿರುತ್ತಾರೆ. ಹಳೆಯ ವಿದ್ಯಾರ್ಥಿಗಳು ಗೋಡೆಯ ಬರಹ ಬರೆಸಿ ಶಾಲೆ ಅಂದವಾಗಿಸುವಲ್ಲಿ ಸಹಕರಿಸಿದ್ದಾರೆ. ಶಿಕ್ಷಣ ಇಲಾಖೆ, ಗ್ರಾಮ ಪಂಚಾಯತ್, ತಾಲ್ಲೂಕು ಪಂಚಾಯತ್, ಜಿಲ್ಲಾ ಪಂಚಾಯತ್, ಶಾಲೆಗೆ ಬೇಕಾದ ಎಲ್ಲಾ ಭೌತಿಕ ಸೌಲಭ್ಯಗಳನ್ನು ಒದಗಿಸಿ ಶಾಲೆಯನ್ನು ಉತ್ತಮ ಶಾಲೆಯಾಗಿ ಪರಿವರ್ತಿಸಲು ಸಹಕರಿಸಿದ್ದಾರೆ.

## ವಿಶೇಷ ಸಾಧನೆ:-

1. ಪ್ರತಿ ವರ್ಷವೂ ಶಾಲಾ ವಿದ್ಯಾರ್ಥಿಗಳು ಕಲಿಕೋತ್ಸವ ಹಾಗು ಪ್ರತಿಭಾ ಕಾರಂಜಿಯಲ್ಲಿ ಉತ್ತಮ ಸಾಧನೆ ಮಾಡಿ ಜಿಲ್ಲಾ ಮಟ್ಟದಲ್ಲಿಯೂ ಪ್ರಶಸ್ತಿಗಳನ್ನು ಗಳಿಸಿರುತ್ತಾರೆ.
2. ಉತ್ತಮ ಕೈ ತೋಟ ನಿರ್ವಹಣೆಗಾಗಿ ಎರಡು ಬಾರಿ ಹಸಿರು ಶಾಲೆ ಪ್ರಶಸ್ತಿ ಪಡೆಯಲಾಗಿದೆ.
3. ಔಷಧಿ ವನ ನಿರ್ಮಾಣಕ್ಕಾಗಿ ಧನ್ವಂತರಿ ಶಾಲಾ ಪ್ರಶಸ್ತಿಯನ್ನು ಪಡೆಯಲಾಗಿದೆ.
4. ಶಾಲಾ ಮುಖ್ಯ ಶಿಕ್ಷಕಿಯವರಿಗೆ ತಾಲ್ಲೂಕು ಮಟ್ಟದ ಉತ್ತಮ ಶಿಕ್ಷಕಿ ಪ್ರಶಸ್ತಿ ನೀಡಿ ಸನ್ಮಾನಿಸಲಾಗಿದೆ.
5. ಕೈ ತೋಟ ನಿರ್ವಹಣೆಗಾಗಿ ಜಿಲ್ಲಾ ತೋಟಗಾರಿಕಾ ಇಲಾಖೆ ಇಂದ ಪ್ರಥಮ ಬಹುಮಾನ ದೊರೆತಿದೆ.
6. ಇಂಡಿಯನ್ ಟ್ಯಾಲೆಂಟ್ ಪರೀಕ್ಷೆಯಲ್ಲಿ ಉತ್ತಮ ಸಾಧನೆಗಾಗಿ ಶಾಲೆ ಹಾಗು ಶಿಕ್ಷಕರಿಗೆ ಪ್ರಶಸ್ತಿ ನೀಡಲಾಗಿದೆ.






SHOT ON MI A1
MI DUAL CAMERA

